ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 14th August 1969

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

Obituary reference

re : The Demise of Dr. Zakir Hussain, former President of India

MR. SPEAKER.—I very much regret to announce the sad demise of Dr. Zakir Hussain, former President of India, on 3rd May this year.

The Hon. Leader of the House will move the condolence resolution.

SRI VEERENDRA PATIL (Chief Minister).—Sir, with your permission I beg to move the following resolution :

> " That this House places on record its profound sorrow at the sad demise of Dr. Zakir Hussain former President of India on 3rd May 1969, and conveys the deep sympathies to the Members of the bereaved family."

Dr. Zakir Hussain's sudden passing away on May 3, 1969 was a great loss to the Indian Nation, at a critical juncture in its history. He was a giant among Indian educationists. He was the finest flower of Indo-Saracenic culture, embodying dignity, scholarship and refinement Born in 1897, he took his B.A. degree in 1918, his M.A. a year later and began his life's career as a teacher. In the upsurge of the Gandhian non-co-operation movement, he gave up this assignment at the call of the Father of the Nation. After this determination to work for the country's causes he joined hands with Hakim Ajmal Khan in the Jamia Millia which was established to impart education on nationalist lines. During 1922 he left for Berlin in Germany for pursuit of higher studies and there he obtained his doctorate. As soon as he returned to his homeland, he found the Jamia Millia undergoing untold difficulties. The death of Hakim Ajmal Khan in 1927, left the Institution in a

(SRI VEERENDRA PATIL)

pitiable condition. Zakir Saheb immediately put his heart and soul to rehabilitate the Institution and gave it a secured foundation. Jamia Millia is now the living monument of Dr. Zakir Hussain's supreme sacrifice and great efforts.

Our late President, whose loss we deeply mourn today was a great man of culture. As Vice-President and later as our worthy President, he visited our State many times. He was affable, unassuming and unostentatious. His association with the people of India engendered faith and love. As a gentlemen he was highly revered. He was frank and cordial with all those who came in contact with him. Throughout his life he vigorously followed the path of nationalism. He condemned the forces of disruption and worked passionately for a complete social order, where the majority and minority communities could think that the fate of the one is interlinked with that of the other. He was a firm believer and supporter of the principle of education through craft. He was the originator of the basic type of education, which was so dear to Gandhiji.

In the Historic days preceding our Independence, he stood in the forefront to avert the partitioning of India. His great efforts to bring about concord between the Indian National Congress and the Muslim League are too well known. He wanted sincerely to avert the tragedy of partition. The great blow of India's partition in 1947 and the subsequent tragic happenings saddened him. Without the least desire to join the Ministry, he worked wholeheartedly to rehabilitate the Muslims, Hindus and Sikhs, who suffered from the violent activities. Even after India attained Independence, Dr. Zakir Hussain fought hard to eliminate the communal virus and stood in the vanguard to fight the menace. His work in the Aligarh University will be long remembered. He shaped the Campus on right lines and made it a centre for cosmopolitanism. He had his own opinion on casteism. He used to say : " Caste as a political institution has become more dangerous than as a social institution."

From the year 1952 his field of activities widened. While he handled the affairs of the Aligarh University he became a Member of the Rajya Sabha, the University Grants Commission and other bodies. He was invited to reorganise the Osmania University at Hyderabad. His profound knowledge, deep scholarship, innate humanism, great humility and capacity for self-effacement made Gandhiji to give him the high responsibility to manage the *Nai Talim*. He was Governor of Bihar and later India's Vice-President. He was elected to the exalted office of the Presidentship of India in May 1967. From the confines of Rashtrapathi Bhavan in Delhi, he never deviated from the path of how a President in a democracy should conduct himself. He was impartial and always acted according to the letter and spirit of the Constitution.

In paying this tribute to the departed Prisident, I have no hesitation in saying that there was no worthier citizen in India than Dr. Zakir Hussain. He was held in universal respect as our Rashtrapatiji. He held that high Office with dignity and enhanced the prestige of India in the world. He was a symbol of unity and integrity. He was liked by all communities and his qualities of head and heart endeared him to all sections of the Indian Community.

Today the world is ridden with crisis. We miss Dr. Hussain at this juncture. Hard work and knowledge, calm and composure, dignity and humility, adherence to principles in life, these and many other virtues were a true reflection of the character and personality of Dr. Zakir Hussain. In his death, India has lost a valiant fighter for freedom, a great educationist, a cultured and refined soul, a sound statesman and a leader of humanity. We deeply mourn his demise and pray God to give peace to his soul. We send our heartfelt sympathies to Begum Shahajehan, his wife, in this hour of sorrow.

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಸಭಾಪತಿಯವರೇ, ಸಭಾನಾಯಕರು ಮುಂಡಿಸಿರುವ ದಿವಂಗತ ಜಾಕೀರ್ ಹುಸೇನರ ಆತ್ಮಕ್ಕೆ ಗೌರವವನ್ನು ಸಲ್ಲಿಸುವ ಮತ್ತು ಶ್ರದ್ಧಾಂಜಲಿಯನ್ನು ಅರ್ಪಿಸುವ ನಿರ್ಣಯಕ್ಕೆ ನನ್ನ ಸಂಪೂರ್ಣ ಸಹಕಾರವನ್ನು ನೀಡುತ್ತೇನೆ. ಡಾ. ಜಕೀರ್ ಹುಸೇನರು ಒಬ್ಬ ಶ್ರೇಷ್ಠ ಭಾರತೀಯರಾಗಿದ್ದರು ಮತ್ತು ಒಳ್ಳೆಯ ರಾಷ್ಟ್ರೀಯ ವ್ಯಕ್ತಿಯಾಗಿದ್ದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಭಾರತಕ್ಕಾಗಿ ಅಪಾರವಾಗಿ ಸೇವೆ ಸಲ್ಲಿಸಿದ ಮತ್ತು ವಿಶೇಷವಾಗಿ ತ್ಯಾಗವಾಡಿದ ಒಬ್ಬ ಮಹಾ ಪುರುಷರನ್ನು ಭಾರತ ಇಂದು ಕಳೆದುಕೊಂಡಿದೆ. ನಮ್ಮ ದೇಶದಲ್ಲಿ ಅನೇಕ ಧರ್ಮಗಳಿದ್ದರೂ ಕೂಡ ಎಲ್ಲ ಧರ್ಮಗಳನ್ನೂ ಕೂಡ ಅವರು ಏಕರೀತಿಯಿಂದ ಗೌರವಿಸುತ್ತಿದ್ದರು. ಅವರ ನೀತಿಯು ಸದಾಕಾಲವೂ ನಮಗೆಲ್ಲಾ ಆದರ್ಶಪ್ರಾಯವಾಗಿದೆ. ಅದು ಸದಾಕಾಲದಲ್ಲೂ ನಮಗೆ ಮಾರ್ಗದರ್ಶಕವಾಗಿದೆ. ಅವರು ವಿದ್ಯಾಸಂಸ್ಥೆಗಳು ಮತ್ತು ವಿಶ್ವವಿದ್ಯಾನಿಲಯದ ಕಾರ್ಯಕರಾಪಗಳಲ್ಲಿ ಬಹಳ ಆಸಕ್ತಿ ವಹಿಸಿದ್ದರು.

ಅಂತಹ ವ್ಯಕ್ತಿ ನಮ್ಮ ಕಣ್ಮರೆಯಾಗಿದ್ದಾರೆ. ಇವತ್ತು ಜಾಕೀರ್ ಹುಸೇನ್‌ರವರ ಅಗಲಿಕೆಯಿಂದ ರಾಷ್ಟ್ರಪತಿ ಸ್ಥಾನಕ್ಕೆ, ಇಡೀ ಭಾರತಕ್ಕೂ ಕೂಡ, ಮತ್ತು ರಾಜಕೀಯವಾಗಿಯೂ ಕೂಡ ಎಂತಹ ಒಂದು ಎಚ್ಚೆತ್ತ ಪರಿಸ್ಥಿತಿಯನ್ನುಂಟುಮಾಡಿದೆ ಎಂಬುದನ್ನು ನಾವು ನೋಡುತ್ತಾ ಇದ್ದೇವೆ. ಅವರ ಆತ್ಮಶಕ್ತಿ ಈ ರಾಷ್ಟ್ರದಲ್ಲಿ ಎಂತಹದು ಇತ್ತು ಅನ್ನುವಂತಹದನ್ನು ಕೂಡ ನಾವು ಮರೆಯುವ ಹಾಗಿಲ್ಲ. ಎಂದೆಂದಿಗೂ ಮರೆಯದಂತಹ ಈ ವ್ಯಕ್ತಿ ಈ ರಾಷ್ಟ್ರದಲ್ಲಿ ಉದ್ಭವವಾಗಿತ್ತು. ಜಾಕೀರ್ ಹುಸೇನ್‌ರವರ ಆತ್ಮಜ್ಯೋತಿ ರಾಷ್ಟ್ರಕ್ಕೆ ಒಂದು ಎಚ್ಚರಿಕೆ ಈ ದೇಶದಲ್ಲಿ ಉಂಟುಮಾಡಿದೆ ಎಂದು ಸ್ಮರಣೆ ಮಾಡಿ, ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ಈಯಲಿ ಎಂದು ಪ್ರಾರ್ಥನೆ ಮಾಡಿ ಸಭಾನಾಯಕರು ಆಡಿದಂತಹ ಎಲ್ಲಾ ಮಾತುಗಳಿಗೂ ನನ್ನ ಸಹಕಾರವನ್ನು ನೀಡಿ ಅವರ ಸಂಸಾರಕ್ಕೆ ಈ ಸಭೆಯ ಅನುಕಂಪವನ್ನು ತಲುಪಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೇ, ಸಭಾನಾಯಕರಾದ, ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರೇಂದ್ರ ಪಾಟೀಲರವರು ಮಾಜಿ ರಾಷ್ಟ್ರಾಧ್ಯಕ್ಷರಾದ ದಿವಂಗತ ಜಾಕೀರ್‌ಹುಸೇನ್‌ರವರ ಬಗ್ಗೆ ವ್ಯಕ್ತಪಡಿಸಿದ ಅನುತಾಪದಲ್ಲಿ ನಾನು ಭಾಗಿಯಾಗಲಚ್ಚಿಸುತ್ತೇನೆ. ಡಾಕ್ಟರ್ ಜಾಕೀರ್ ಹುಸೇನ್‌ರವರು ಧರ್ಮನಿರಪೇಕ್ಷಿತ ರಾಷ್ಟ್ರದಲ್ಲಿ ರಾಷ್ಟ್ರದ ಇಡೀ ಸಂಸ್ಕೃತಿಯ ಪ್ರತೀಕವಾಗಿದ್ದರು. ಅವರನ್ನು ಕಳೆದುಕೊಂಡ ಈ ರಾಷ್ಟ್ರಕ್ಕೆ ತುಂಬಲಾರದ ಹಾನಿಯಾಗಿದೆ. ಈಗಾಗಲೇ ರಾಷ್ಟ್ರ ದಿವಂಗತ ನಾಯಕರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದೆ. ನಾವು ತಡವಾಗಿ ಸೇರುತ್ತಾ ಇದ್ದೇವೆ, ಆದ್ದರಿಂದ ಔಪಚಾರಿಕವಾಗಿ ವಿಧಾನಸಭೆ ಈ ದಿನ ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ. ಈ ಒಂದು ಕಾರ್ಯಕ್ರಮದಲ್ಲಿ ನಾನು ನಮ್ಮ ಪಕ್ಷದ ಮತ್ತು ವಿರೋಧ ಪಕ್ಷದ ಎಲ್ಲ ಸದಸ್ಯರ ಪರವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ. ಅವರ ಜೀವಾವಧಿಯ ಕಾಲಕ್ಕೆ

†Indicates that the remarks or speeches have not been revised by the member concerned.

(ಶ್ರೀ ಎಸ್. ಗೋಪಾಲಗೌಡ)

ರಾಜಕೀಯ ಕಾರಣಗಳಿಗಾಗಿ ನಾವು ಅವರಿಗೆ ಓಟು ಕೊಡಲಿಲ್ಲ, ಅದಾಗ್ಯೂ ಅವರ ವ್ಯಕ್ತಿತ್ವದ ಬಗ್ಗೆ, ಅವರು ರಾಷ್ಟ್ರಕ್ಕೆ ಸಲ್ಲಿಸಿದ ಅಪಾರ ಸೇವೆಯ ಬಗ್ಗೆ, ಮುಖ್ಯವಾಗಿ ವಿದ್ಯಾಕ್ಷೇತ್ರದಲ್ಲಿ ಅವರು ಸಲ್ಲಿಸಿದ ಕಾಣಿಕೆ ರಾಷ್ಟ್ರಕ್ಕೆ ಒಂದು ದೊಡ್ಡ ಕಾಣಿಕೆಯಾಗಿದೆ. ಅವರು ಮತದಲ್ಲಿ ಮುಸ್ಲಿಂರು ಆಗಿದ್ದರೂ ರಾಷ್ಟ್ರದ ಎಲ್ಲಾ ಧರ್ಮಗಳ ಮತ್ತು ಭಾರತೀಯ ಸಂಸ್ಕೃತಿಯ ತಿರುಳನ್ನು ಅರಿತು ಗಾಂಧೀಜಿಯವರ ಸಂದೇಶವನ್ನು ರಾಷ್ಟ್ರಕ್ಕೂ ಮತ್ತು ಹೊರಗೂ ಸಾರಿರತಕ್ಕ ಒಬ್ಬ ಸರಳ ಜೀವಿ ಹಾಗೂ ಮೇಧಾವಿಯಾಗಿದ್ದರು ಅವರ ಮರಣದಿಂದ ತೆರವು ಆಗಿರತಕ್ಕ ಸ್ಥಾನವನ್ನು ಇವತ್ತು ತುಂಬಲಿದ್ದೇವೆ. ನಾವು ಈ ಸಂದರ್ಭದಲ್ಲಿ ಅಷ್ಟೇ ಘನತೆ, ಗೌರವ ಹೊಂದಿರತಕ್ಕ, ರಾಷ್ಟ್ರದ ಎಲ್ಲಾ ಪಕ್ಷ ಹಾಗೂ ನೀತಿ ನಿಯಮಗಳನ್ನು ಎತ್ತಿ ಹಿಡಿಯುತಕ್ಕ ಒಬ್ಬ ವ್ಯಕ್ತಿಯನ್ನು ಆರಿಸ ಬೇಕಾಗಿದೆ. ಆ ಕೆಲಸವನ್ನು ನಾವೀಗ ಮಾಡಲಿದ್ದೇವೆ. ಆದರೆ ಈಗ ಆ ಸ್ಥಾನಕ್ಕೆ ನಡೆಯಬೇಕಾದ ಚುನಾವಣೆಯ ಸಂದರ್ಭದಲ್ಲಿ ಏನೊಂದು ಬಿಸಿಯಾದ ವಾತಾವರಣವುಂಟಾಗಿದೆ ಅದರ ಬಗ್ಗೆ ನಾನು ಪ್ರಸ್ತಾಪಮಾಡುವುದಕ್ಕೆ ಅಥವಾ ಮಾತನಾಡುವುದಕ್ಕೆ ಇಚ್ಛಿಸುವುದಿಲ್ಲ. ಈಗ ಆ ಅಧ್ಯಕ್ಷಸ್ಥಾನಕ್ಕೆ ನಡೆಯಲಿರುವ ಚುನಾವಣೆಯಲ್ಲಿ ನಮ್ಮ ಪಕ್ಷದವರು ಗಿರಿಯವರಿಗೆ ಬೆಂಬಲಕೊಡಬೇಕೆಂದು ಒಂದು ನಿರ್ಣಯವನ್ನು ಮಾಡಿದ್ದಾರೆ. ಆ ಬಗ್ಗೆ ಕೆಲವರು ಆರೋಪ ಪ್ರತ್ಯಾರೋಪಗಳನ್ನು ನಡೆಸಿದ್ದಾರೆ. ಆದರೆ ಇದು ಅಂಥ ಒಂದು ಸಾಮಾನ್ಯವಾದ ವಿಷಯವಲ್ಲ ಎಂಬುದೂ ಕೂಡ ನನಗೆ ಗೊತ್ತಿದೆ. ಈ ದಿವಸ ಆ ರಾಷ್ಟ್ರಾಧ್ಯಕ್ಷರ ಚುನಾವಣೆಯ ಸಂಬಂಧದಲ್ಲಿ ಹಿಂದೆಂದೂ ಕಾಣಿಸಿದ್ದಂಥ ಒಂದು ರಣಕಣವನ್ನು ಎಬ್ಬಿಸಿರುವುದು ನಮ್ಮ ಇಂದಿನ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಸ್ಥಾಪಿಸಿದಂತಾಗಿದೆ ಎಂದು ಮಾತ್ರ ಹೇಳುತ್ತೇನೆ.

ಹಿಂದೆ ಯಾರು ರಾಷ್ಟ್ರದ ಉಪಾಧ್ಯಕ್ಷರಾಗಿರುತ್ತಾರೋ ಅವರನ್ನು ಖಾಲಿಯಾದ ಅಧ್ಯಕ್ಷ ಸ್ಥಾನದಲ್ಲಿ ಅಧ್ಯಕ್ಷರನ್ನಾಗಿ ಆರಿಸತಕ್ಕದ್ದು ಹಿಂದಿನಿಂದಲೂ ನಡೆದುಕೊಂಡು ಬಂದಿರತಕ್ಕ ಒಂದು ಪರಂಪರೆ.

Mr. SPEAKER.—I request the hon. Member to avoid such references.

ಶ್ರೀ ಎಸ್. ಗೋಪಾಲಗೌಡ.—ಏನೇ ಕಾರಣಗಳಿರಲಿ ನಾವು ಅಂಥಾ ಒಂದು ಪರಂಪರೆಯನ್ನು ಮುರಿಯಬಾರದು. ಅದಕ್ಕೆರತಕ್ಕ ಘನತೆ ಗೌರವಗಳನ್ನು ನಾವು ಎತ್ತಿಹಿಡಿಯಬೇಕು ಎನ್ನುವುದು ನನ್ನ ಅಭಿಲಾಷೆ. ನಮ್ಮ ಕರ್ನಾಟಕದಲ್ಲಿಯೂ ಹಾಗೆಯೇ, ಇಲ್ಲಿ ರಾಜ್ಯಪಾಲರು ಆಗಿದ್ದವರನ್ನು ರಾಷ್ಟ್ರದ ಉಪಾಧ್ಯಕ್ಷರಾಗಿ ಹಿಂದೆ ಆರಿಸಿದಿರಿ. ಈಗಲೂ ಕೂಡ ಅಂಥಾ ಒಂದು ಪರಂಪರೆಯನ್ನು ಉಳಿಸಿಕೊಂಡು ಬಂದಿರಿ. ಆದರೆ ಉಪಾಧ್ಯಕ್ಷರಾಗಿದ್ದವರನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಮಾಡುವ ಒಂದು ಸತ್ಸಂಪ್ರದಾಯವನ್ನು ಮುರಿದುದರಿಂದ, ಆ ಸ್ಥಾನಕ್ಕೆ ನಡೆಯಲಿರುವ ಚುನಾವಣೆಯು ಒಂದು ರಣಕಣವಾಗಿದೆ, ಮತ್ತು ಆದರಿಂದ ಆ ಸ್ಥಾನದ ಘನತೆ ಗೌರವಗಳು ಹಾಳಾಗುತ್ತಿವೆ. ಈ ಒಂದು ಅಂಶವನ್ನು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲು ನಾನು ಈ ವಿಚಾರವನ್ನೆತ್ತಿದೆ, ಅಷ್ಟೆ. ನಮ್ಮನ್ನು ಅಗಲಿದ ನಾಯಕರಿಗೆ ನನ್ನ ಶ್ರದ್ಧಾಂಜಲಿಯನ್ನರ್ಪಿಸುತ್ತೇನೆ. ಅವರಿಗೆ ನಾಡಿನಲ್ಲಿ ಕೇಂದ್ರ ಸರ್ಕಾರದ ಸಹಕಾರ ಸಹಾಯಗಳಿಂದ ಒಂದು ಸ್ಮಾರಕವನ್ನು ನಿರ್ಮಿಸಬೇಕೆಂದು ಹೇಳಿ ಹಾಗೂ ಅವರು ನಮ್ಮ ರಾಷ್ಟ್ರದ ಧರ್ಮನಿರಪೇಕ್ಷಿತ ಪ್ರತೀಕವಾಗಿದ್ದುದರಿಂದ ರಾಷ್ಟ್ರ ರಾಜ್ಯಗಳು ಅವರ ಮೇಲ್ಪಂಕ್ತಿಯನ್ನು ಅನುಸರಿಸಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಬಿ. ಹ್ಯಾಲನಯ್ಯ (ಹಾಸನ).—ಮಾನ್ಯ ಅಧ್ಯಕ್ಷರೇ, ಈ ದಿನ ನಮ್ಮ ಸಭಾ ನಾಯಕರು ದಿವಂಗತ ಜಾಕೀರ್ ಹುಸೇನರ ಬಗ್ಗೆ ಒಂದು ಸಂತಾಪಸೂಚಕ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ಡಾ. ಜಾಕೀರ್ ಹುಸೇನ್‌ರವರನ್ನು ಅವರು ದಿವಂಗತರಾಗುವುದಕ್ಕೆ ಕೆಲವು ದಿನಗಳ ಮುನ್ನ ಭೇಟಿಮಾಡತಕ್ಕಂಥ ಒಂದು ಸದವಕಾಶ ದೊರೆತಿತ್ತು. ಅವರಲ್ಲದ್ದ ಪೂರ್ಣವಿದ್ವತ್, ವಿನಯ ಹಾಗೂ ಸಂಪನ್ನಸೌಜನ್ಯತೆಗಳನ್ನು ನಾವು ಕಂಡಾಗ ಅವರು ಆ ರಾಷ್ಟ್ರಾಧ್ಯಕ್ಷ ಸ್ಥಾನಕ್ಕೆ ಒಂದುಕಿರೀಟಪ್ರಾಯರಾಗಿದ್ದರು ಎನ್ನುವುದೇ ಅಲ್ಲದೆ ಅವರಲ್ಲಿದ್ದ ವಿದ್ಯೆ, ವಿನಯ, ಸೌಜನ್ಯತೆಗಳು ಆ ರಾಷ್ಟ್ರಾಧ್ಯಕ್ಷಪದವಿಯ ಸಂಕೇತವೂ ಆಗಿದ್ದವು, ಎಂಬುದನ್ನು ಅರಿತು ಕೊಳ್ಳುವುದಕ್ಕೆ ನನಗೆ ಅಂಥ ಒಂದು ನಿಕಟ ಸಂಬಂಧವೂ ದೊರೆತಿತ್ತು. ಅವರು ನಮ್ಮ ರಾಷ್ಟ್ರಕ್ಕೆ ಬಹಳ ಅತ್ಯುತ್ತಮವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅಷ್ಟೇ ಅಲ್ಲದೆ ಅವರು ತಮ್ಮಲ್ಲಿದ್ದ ವಿದ್ಯೆ ಸೌಜನ್ಯತೆಗಳಿಂದ ನಾವು ಮುಂದೆ ಹೇಗೆ ನಡೆದುಕೊಳ್ಳಬೇಕೆಂಬುದಕ್ಕೆ ಒಂದು

ಸುಗಮವಾದ ಮಾರ್ಗವನ್ನೂ ಸಹಾ ಹಾಕಿಕೊಟ್ಟಿದ್ದಾರೆ. ಅವರು ಪಕ್ಷಾತೀತರಾಗಿದ್ದರು. ಅವರ ಸ್ಥಾನಕ್ಕೆ ಬರತಕ್ಕ ವ್ಯಕ್ತಿಗಳು ಆ ಸ್ಥಾನದಲ್ಲಿ ಹೇಗೆ ವರ್ತಿಸಬೇಕು ಎಂಬುದನ್ನು ಅವರು ನಡೆದು ತೋರಿಸಿರತಕ್ಕ ಮಾರ್ಗ ಭಾರತಕ್ಕೇ ಕೀರ್ತಿತರತಕ್ಕ ದ್ದಾಗಿದೆ. ಅವರು ಅಂಥ ಒಂದು ಉನ್ನತ ಆದರ್ಶ ಮಾರ್ಗವನ್ನು ಎತ್ತಿ ತೋರಿಸಿದ್ದಾರೆ. ಅಂತಹ ವ್ಯಕ್ತಿಗಳು ಈ ದಿನ ನಮ್ಮಿಂದ ದೂರವಾದುದು ಭಾರತದ ದೌರ್ಭಾಗ್ಯವೆಂದು ಹೇಳಿದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಈ ಮಾನ್ಯ ಸಭೆಯ ನಾಯಕರು ಸೂಚಿಸಿರುವಂತೆ, ಅವರ ಕುಟುಂಬವರ್ಗದವರಿಗೆ ಈ ಸಭೆ ತನ್ನ ಸಂತಾಪವನ್ನು ಸೂಚಿಸುವುದರ ಜೊತೆಗೆ ಈ ದೇಶವೆಲ್ಲಾ ಅವರ ಕಂಬನಿಯಲ್ಲಿ ಪಾಲ್ಗೊಂಡಿದೆಯೆಂದು ಹೇಳಿದರೆ ತಪ್ಪಾಗಲಾರದು. ಅವರು ಮಂಡಿಸಿದ ಸೂಚನೆಗೆ ಸ್ವತಂತ್ರ ಪಕ್ಷದ ಪರವಾಗಿ ನಮ್ಮೆಲ್ಲರ ಸಹಾನುಭೂತಿ ಮತ್ತು ಅಭಿಮತವನ್ನು ಕೊಟ್ಟಿದ್ದೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

† ಶ್ರೀ ಬೋಳ ರಘುರಾಮಶೆಟ್ಟಿ (ಕಾರ್ಕಳ).—ಮಾನ್ಯ ಸಭಾಪತಿಗಳೇ, ಇವತ್ತು ಈ ಸಭೆಯ ಮುಖಂಡರು ತಂದಿರತಕ್ಕ ದುಃಖ ಸೂಚನೆಗೆ ನನ್ನ ಸಂತಾಪವನ್ನು ಸಲ್ಲಿಸಿ ದಿವಂಗತ ಡಾ. ಜಾಕೀರ್ ಹುಸೇನರಿಗೆ ಈ ಸಭೆ ಸಲ್ಲಿಸುವ ಗೌರವದಲ್ಲಿ ನಾನು ಭಾಗಿಯಾಗಿದ್ದೇನೆ. ಡಾ. ಹುಸೇನ್ ಅವರು ನಮ್ಮ ದೇಶದ ಸುಪುತ್ರರಲ್ಲಿ ಒಬ್ಬರಾಗಿದ್ದರು. ಅವರು ನಮ್ಮ ದೇಶದ ಅನೇಕ ಕ್ಷೇತ್ರಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಮುಖ್ಯವಾಗಿ ವಿದ್ಯಾ ಕ್ಷೇತ್ರದಲ್ಲಿ ಅವರು ವಹಿಸಿದಂಥ ಭಾಗ, ಜವಾಬ್ದಾರಿ ಮಹತ್ವದ್ದು. ಅವರು ವಿದ್ಯಾಭಿಮಾನಿಗಳಾಗಿದ್ದರು. ಅನೇಕ ವಿದ್ಯಾಸಂಸ್ಥೆಗಳನ್ನು ಕಟ್ಟಿದ್ದರು, ಮತ್ತು ಬೆಳೆಸಿದ್ದರು. ಅವರ ಅಕಾಲಿಕ ನಿಧನದಿಂದ ನಮ್ಮ ದೇಶಕ್ಕೆ ತುಂಬಲಾರದಷ್ಟು ನಷ್ಟವಾಗಿದೆ. ಇವತ್ತು ಪ್ರಜಾಪ್ರಭುತ್ವದ ಒಂದು ಸಂಧಿಗ್ಧ ಸಂದರ್ಭದಲ್ಲಿ ಪ್ರಜಾಪ್ರಭುತ್ವವನ್ನು ಅವರು ನಮ್ಮ ದೇಶದಲ್ಲಿ ಸಮರ್ಥವಾಗಿ ನೆಲಸಬೇಕೆಂದು ಯಾವ ರೀತಿಯಲ್ಲಿ ಹೋರಾಡಿದ್ದರೋ ಅದನ್ನು ನಾವು ಉಳಿಸಿಕೊಳ್ಳುವ ಹಾಗೆ ಪರಮಾತ್ಮನು ನಮಗೆ ಒಳ್ಳೆಯ ಸದ್ಬುದ್ಧಿ ಕೊಡಲಿ. ಅದೇ ದಿವಂಗತ ಡಾ. ಜಾಕೀರ್ ಹುಸೇನರಿಗೆ ನಾವು ಸಲ್ಲಿಸುವ ನಿಜವಾದ ಗೌರವ. ಯಾವ ತತ್ವಕ್ಕೆ ಅವರು ಹೋರಾಡಿದ್ದರೋ, ಯಾವ ಒಂದು ತತ್ವಕ್ಕೆ ಜೀವಿಸಿದ್ದರೋ, ಅದನ್ನು ನಾವು ನಮ್ಮ ದೇಶದಲ್ಲಿ ಉಳಿಸಿಕೊಂಡು ಪ್ರಜಾಪ್ರಭುತ್ವಕ್ಕೆ ಹೋರಾಡಬೇಕು. ಇವತ್ತು ನಮ್ಮ ಮಾನ್ಯ ಸ್ಪೀಕರ್ ಅಗಲೀ ಪಾರ್ಲಿಮೆಂಟ್‌ನ ಸ್ಪೀಕರ್ ಅಗಲೀ ಸಭೆಯ ಗೌರವವನ್ನು ಉಳಿಸತಕ್ಕವರಾಗಿದ್ದಾರೆ. ಅದೇ ರೀತಿ ರಾಷ್ಟ್ರಾಧ್ಯಕ್ಷರು ನಮ್ಮ ದೇಶದ ಗೌರವವನ್ನು ಉಳಿಸಿರತಕ್ಕವರಾಗಿದ್ದಾರೆ. ಡಾ. ಜಾಕೀರ್ ಹುಸೇನ್‌ರವರು ನಮ್ಮ ರಾಷ್ಟ್ರದ ಗೌರವವನ್ನು ಅದೇ ರೀತಿ ಉಳಿಸಿಕೊಂಡು ಬಂದಿದ್ದಾರೆ. ಈಗಿನ ಸಂಧಿಗ್ಧ ಪರಿಸ್ಥಿತಿಯಲ್ಲಿ ನಾವು ಯಾವ ಪಕ್ಷಕ್ಕೆ ಸೇರಿದ್ದರೂ ನಮ್ಮ ದೇಶದ ಗೌರವವನ್ನು ಉಳಿಸುವ ರೀತಿಯಲ್ಲಿ ನಾವು ಹೋರಾಡಬೇಕಾಗಿದೆ. ಅವರು ಆ ರೀತಿಯಾಗಿ ಹೋರಾಡಿದ್ದಾರೆ. ಅವ್ಹರಿಂದ ಅವರ ಗುಣಗಾನ ಮಾಡಿ ಅವರಿಗೆ ಸಲ್ಲಿಸ ಬೇಕಾದ ಶ್ರದ್ಧಾಂಜಲಿಯನ್ನು ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Sri V. N. PATIL (Humnabad).—Sir, I associate myself with the Leader of the House in conveying our condolences to the bereaved family of the late Dr. Zakir Hussain. Dr. Zakir Hussain was one with the Indian masses; he was a man of the people. It is very difficult to express our feelings in words. It is very difficult to fill up the void that has been created by his untimely death.

Dr. Zakir Hussain was an educationist; giving birth to the concept of basic education; he had his finger always at the pulse of the nation and he truly represented the secular character of our country. He was most unassuming. Dr. Zakir Hussain was a symbol of simplicity. He never claimed anything for his own self. Whatever he did was always in the best interests of the nation. He never aspired for the position that was bestowed upon him by the nation. That was the virtue and character of the highest dignity of the country unlike what we find today when constitutional crisis is likely to come about. There were constitutional crisis in the past also but Dr. Zakir Hussain was the first person to move

(SRI V. N. PATIL)

with the times, to act according to the pulse of the nation and to move with the tradition of Indian character. A team of Dr. Radhakrishnan as President and Dr. Zakir as Vice-President was one blended with philosophers and educationalists. Very difficult to have in future especially when the sanctity attached to this office is being permitted to be soiled in power politics muddle by vested interests and reactionaries in factional fights. He was a great patriot. Not only was he a patriot but like the father of the Indian freedom movement Bapu he also devoted his life for upholding the secular character of our country. Dr. Zakir Hussain also proceeded on the footsteps of Bapuji. The tribute that the Indian nation paid to him was highly superb and it shows that every Indian is entitled to reach the goal to which he is entitled, inrespective of religions faith, caste and creed. He served the country, by carrying the same in an unified and harmonious manner trying to see that no constitutional crisis occurred. Unambitiousness was his bane During his time, several Opposition Governments were toppled and crushed, and we never thought that Dr. Zakir Hussain was personally a party to those things. On the other hand, we thought that he was performing his constitutional duties. He acted according to the advice of the Central Cabinet even when it went against the wishes of the people but in discharge of his duties under the constitution. It could have been a befitting tribute for our country to elect once again a person representing the minority in the country in this Gandhi Centenery year. A person, who has got faith in socialism, secularism and the spirit to move with the Indian nation, and who is free from factional reactionery politics should be the President of the country. Unless there is devotion to duty and unless there is faith in socialism in the future President, it will not be a befitting tribute to Dr. Zakir Hussain. Several virtues of a man are really not realised when he is alive, but the moment he is no more, the noblest deeds he did and his pious attitude are remembered. In Urdu there is a proverb, which says :—

"Oh phool saar Chadda jowatanse Nikal Gaya Izzat oosee milke joo watan se Nikal Gaya"

Though Dr. Zakir Hussain is no more with us, his best deeds are with us. We must see that a nation that was built on the sacrifices of millions should progress in the right socialist direction, not succumbing to power politics of the Vested interest, but treading the path of Socialism for the benefit of all.

I thank the Chair for having permitted me to say a few words.

† ಶ್ರೀ ಎಸ್. ಎಸ್. ಅರಕೇರಿ (ಬಳ್ಳೊಳ್ಳಿ).—ಮಾನ್ಯ ಸಭಾಪತಿಯವರೇ, ಇವತ್ತಿನ ದಿವಸ ಮಾನ್ಯ ಮುಖ್ಯಮಂತ್ರಿಯವರಾದಂತಹ ಶ್ರೀ ವೀರೇಂದ್ರ ಪಾಟೀಲರು ಮಂಡಿಸಿದಂತಹ ಈ ಒಂದು ಅನುತಾಪ ಸೂಚನೆಗೆ ನನ್ನ ಬೆಂಬಲವನ್ನು ಕೊಡುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ದಿವಂಗತ ಡಾ. ಜಾಕೀರ್ ಹುಸ್ಸೇನರು ಭಾರತೀಯ ನಾಯಕರಲ್ಲಿ ಅಗ್ರಗಣ್ಯರು. ಅವರು ರಾಷ್ಟ್ರಪತಿಯಾಗಿದ್ದಾಗ ಮಾಡಿದಂತಹ ಸೇವೆ, ಯಾವ ಭಾರತೀಯನೂ ಮರೆಯಲಾರದಂತಹ ಸೇವೆ

ಯಾಗಿದೆ. ಅಂತಹ ಒಂದು ಸೇವೆಯನ್ನು ಅವರು ಮಾಡಿಹೋಗಿದ್ದಾರೆ. ಅವರು ಮಹಾತ್ಮಾ ಗಾಂಧೀಜಿಯವರು ಯಾವ ಒಂದು ಹಿಂದೂ ಮುಸ್ಲಿಂ ಐಕ್ಯಮತ್ಯಕ್ಕಾಗಿ ಹೋರಾಟ ಮಾಡಿ ಒಂದು ಆದರ್ಶಮಾರ್ಗವನ್ನು ಹಾಕಿಕೊಟ್ಟರೋ, ಆ ಒಂದು ಐಕಮತ್ಯಕ್ಕಾಗಿ, ಅದರ ಒಂದು ಸಂಘಟನೆಗಾಗಿ ಇಡೀ ಭಾರತ ದೇಶದ ಹಿಂದೂ ಮುಸ್ಲಿಂ ಜನರಿಗೆ ಒಂದು ಆದರ್ಶ ಹಾದಿಯನ್ನು ಹಾಕಿದ್ದಾರೆ. ಅಂತಹ ಹಾದಿಯಲ್ಲಿ ನಡೆದುದೇ ಆದರೆ, ನಮ್ಮ ದೇಶಕ್ಕೆ ಒಂದು ಕಲ್ಯಾಣವಾಗುತ್ತದೆ ಎಂಬ ಅಂತರ್ಗತವಾದ ಸಂದೇಶವನ್ನು ಕೊಟ್ಟು ಹೋಗಿದ್ದಾರೆ. ಶ್ರೀ ಜಾಕೀರ್ ಹುಸ್ಸೇನರು ಧರ್ಮ, ಜಾತಿಗಿಂತಲೂ ದೇಶ ದೊಡ್ಡದು ಎಂಬ ಒಂದು ಮಾದರಿಯನ್ನು ನಮಗೆ ತೋರಿಸಿಕೊಟ್ಟು ಹೋಗಿದ್ದಾರೆ. ಇದಲ್ಲದೆ ಅವರು ಮೊನ್ನೆ ಬೆಂಗಳೂರಿಗೆ ಬಂದಿದ್ದಂತಹ ಸಮಯದಲ್ಲಿ ಕೆಲವು ಕಠುತರವಾದ ಮಾತನ್ನು ಆಡಿದ್ದಾರೆ. ಅದೇನೆಂದರೆ ಎಲ್ಲಿಯವರೆಗೆ ನಮ್ಮ ದೇಶದಲ್ಲಿ ಸುಮಾರು 15 ಕೋಟಿ ಜನಸಂಖ್ಯೆಗೆ ಕುಡಿಯುವುದಕ್ಕೆ ನೀರು ಸಿಗುವುದಿಲ್ಲವೋ, ಎಲ್ಲಿಯವರೆಗೆ ನಮ್ಮ ದೇಶದಲ್ಲಿರ ತಕ್ಕ ಹರಿಜನರ ಉದ್ಧಾರವಾಗುವುದಿಲ್ಲವೋ, ಅಲ್ಲಿಯವರೆಗೆ ನಮ್ಮ ಭಾರತ ದೇಶವು ಏಳಿಗೆಯಾಗ ಲಾರದು, ಮತ್ತು ಸರಿಸಮಾನವಾದ ಹಕ್ಕನ್ನು ಎಲ್ಲರಿಗೂ ಕೊಡದಿದ್ದರೆ, ದೇಶ ಉಳಿಯಲಾರದು ಎಂದು ಹೇಳಿದ್ದಾರೆ. ಇವತ್ತು ನಾನು ನಮ್ಮ ರಿಪಬ್ಲಿಕನ್ ಪಾರ್ಟಿಯ ವತಿಯಿಂದ, ಮೈಸೂರು ರಾಜ್ಯದ 45 ಲಕ್ಷ ಹರಿಜನರ ವತಿಯಿಂದ ಭಗವಂತನಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಅವರ ಆತ್ಮಕ್ಕೆ ಚಿರಶಾಂತಿಯು ಸಿಕ್ಕಲಿ ಮತ್ತು ಅವರ ಕುಟುಂಬದವರಿಗೆ ಅವರ ಅಗಲುವಿಕೆಯಿಂದ ಉಂಟಾಗಿರತಕ್ಕ ದುಃಖವನ್ನು ಸಹಿಸಲು ಭಗವಂತನು ಅವರಿಗೆ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಅಂತರರಾಷ್ಟ್ರೀಯ ಮುಂದಾಳುಗಳಾದ ಮಹಾತ್ಮ ಗಾಂಧೀಜಿ, ಏಬ್ರಾಹಾಮ್ ಲಿಂಕನ್ ಮತ್ತು ಡಾಕ್ಟರ್ ಅಂಬೇಡ್ಕರ್ ಮುಂತಾದ ವಿಶ್ವಶ್ರೇಷ್ಠ ಮಾನವರ ಸಾಲಿನಲ್ಲಿ ಡಾಕ್ಟರ್ ಜಕೀರ್ ಹುಸೇನ್ ಅವರ ಹೆಸರು ಇದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ದೃಷ್ಟಿಯಿಂದ ಅವರು ಹಾಕಿದಂತಹ ಹಾದಿಯಲ್ಲಿ ನಾವೆಲ್ಲರೂ ಹೋಗೋಣ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

1-30 P.M.

† **Sri H. SIDDAVEERAPPA** (Harihar).—Mr. Speaker Sir, on behalf of the Janata Paksha Party and myself I wish to associate with the fine sentiments expressed by the mover of this resolution. Since you are in a hurry, I do not want to say anything more.

† **Sri B. B. SAYANAK** (Belgaum).—

(*Spoke in Marathi*)

Mr. SPEAKER.—I associate myself with the views and sentiments expressed by the Hon. Leader of the House, Hon. Leader of the Opposition and other hon. Members while speaking on this resolution. I think the sorrow should rather be felt than expressed. As a token of passing this resolution I request the hon. Members to stand in silence for a minute.

(*The Resolution was carried* nem con *the House standing in silence for a Minute*)

Obituary References to the demise of Sriyuths : R. Nagan Gouda, S. H. Thammiah, N. N. Suverna Murthy and H. Hombe Gowda

Mr. SPEAKER.—I also wish to make condolence references to the demise of certain Hon. Gentlemen who expired, since we met last here.